ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 24.11.2022.

**ಮುಖ್ಯ ವಿಚಾರಣೆ – ಪ್ರತಿವಾದಿ ಪರಃ ಶ್ರೀ ಸಿ. ಎಸ್. ಪಿ. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

ದಾವೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2008–09 ನೇ ಸಾಲಿನಿಂದ 2022–23 ನೇ ಸಾಲಿನವರೆಗಿನ ಒಟ್ಟು 10 ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಡಿ–1 ರಿಂದ ನಿಡಿ–10 ಎಂದು, ಎಂ. ಆರ್. ಹೆಚ್. 36/2021–22 ಕ್ಕೆ ಸಂಬಂಧಪಟ್ಟಂತೆ ಮ್ಯೂಟೇಷನ್ ರೆಜಿಸ್ಟರ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ–11 ಎಂದು ಗುರುತಿಸಲಾಯಿತು. ದಿಃ 24.12.1999 ರಂದು ವಾದಿಯರ ಸಹೋದರನಾದ ವರ್ಧಮಾನ ನಾಗಪ್ಪ ಜೀವಣ್ಣನವರ ಇವರು ಪ್ರತಿವಾದಿಯ ತಂದೆ ಹನುಮಂತಪ್ಪ ತಿರುಕಪ್ಪ ಮರಿಯಮ್ಮನವರ ಉರ್ಫ ಕರಿಯಮ್ಮನಪೂಜಾರ ಇವರಿಗೆ ಬರೆದುಕೊಟ್ಟ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಸದರಿ ಕರಾರು ಪತ್ರವನ್ನು 50 ರೂಪಾಯಿ ಛಾಪಾ ಕಾಗದದ ಮೇಲೆ ತಯಾರಿಸಿದ್ದರಿಂದ ಸದರಿ ಕರಾರು ಪತ್ರಕ್ಕೆ ನಿಗದಿತ ಮುದ್ರಾಂಕ ಶುಲ್ಕ ಪಾವತಿ ಮಾಡದೇ ಇರುವುದರಿಂದ ನಿಶಾನೆಯಾಗಿ ಗುರುತಿಸಲು ಆಗುವುದಿಲ್ಲ ಎಂದು ವಾದಿ ಪರ ವಕೀಲರ ತಕರಾರು ಮಾಡಿರುತ್ತಾರೆ. ಆದುದರಿಂದ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಬಹುದೇ, ಇಲ್ಲವೋ ಎಂದು ಸುನಾವಣೆಗೆ ಈ ಹಂತದಲ್ಲಿ ದಾವೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.